ಮೂಲ ದಾವಾ ನಂ. 74/2012

ಡಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 30-06-2022 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಜಿ. ಪಿ. ಎಚ್. ವಕೀಲರಿಂದಃ**

ಈ ದಾವೆ ದಾಖಲಿಸುವ ಸಮಯದಲ್ಲಿ ನನ್ನ ತಂದೆ ಜೀವಂತ ಇದ್ದರು. ನಾನು 6 ರಿಂದ 8 ನೇ ಪ್ರತಿವಾದಿಗಳ ಪರವಾಗಿ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ. 6 ರಿಂದ 8 ನೇ ಪ್ರತಿವಾದಿಯರು ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ನನಗೆ ಜಿ ಪಿ ಎ ಕೊಟ್ಟಿರುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಅದನ್ನು ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ಜಿ ಪಿ ಎ ಕೊಟ್ಟಿರುತ್ತಾರೆ ಎಂದು ನನಗೆ ನೆನಪಿಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೋ ಇಲ್ಲವೋ ನಾನು ಕೇಳಿರುವುದಿಲ್ಲ.

ಸರ್ವೆ ನಂ. 401 ರ ಜಾಗವನ್ನು ಖರೀದಿ ಮಾಡುವ ಸಮಯದಲ್ಲಿ ನನ್ನ ತಂದೆ ಜೀವಂತ ಇದ್ದರು. ನಾನು ಸದ್ರಿ ವ್ಯವಹಾರದಲಿ ಭಾಗವಹಿಸಿರುವುದಿಲ್ಲ, ಸಾಕ್ಷಿ ಮುಂದುವರಿದು ನಾನು ಆಗ ಚಿಕ್ಕವನಾಗಿದ್ದೆ ಎಂದು ನುಡಿಯುತ್ತಾರೆ. ಆಗ ನಾನು ಚಿಕ್ಕವನಾಗಿದ್ದ ಕಾರಣ ಸದ್ರಿ ಆಸ್ತಿಯನ್ನು ಯಾರಿಂದ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಕಾನೂನಿನ ಸಲಹೆ ಪಡೆದಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸದ್ರಿ ಆಸ್ತಿಯನ್ನು ನನ್ನ ತಂದೆ ಖರೀದಿ ಮಾಡಿದ್ದಾರೆ ಎಂದು ನಾನು ದಾಖಲೆಯನ್ನು ನೋಡಿ ಹೇಳುತ್ತಿದ್ದೇನೆ. ಕ್ರಯಪತ್ರದ ಮೂಲ ದಾಖಲೆ ನನ್ನ ಬಳಿ ಇದೆ. ನನ್ನ ತಂದೆ ಸದ್ರಿ ಆಸ್ತಿಯನ್ನು 1 , 2 ಮತ್ತು 4 ನೇ ಪ್ರತಿವಾದಿಯಿಂದ ಖರೀದಿ ಮಾಡಿರುತ್ತಾರೆ. ಆ ಸಮಯದಲ್ಲಿ ಸದ್ರಿ ಸರ್ವೆ ನಂಬರಿನ ಒಟ್ಟೂ ವಿಸ್ತೀರ್ಣ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಾನು ಸದ್ರಿ ಜಾಗವನ್ನು ನೋಡಿರುತ್ತೇನೆ. ಆ ಜಾಗವನ್ನು ಖರೀದಿ ಮಾಡುವ ಪೂರ್ವದಲ್ಲಿ ಸರ್ವೆ ಮಾಡಿಸಿದ್ದರಾ ಇಲ್ಲವಾ ನನಗೆ ಗೊತ್ತಿಲ್ಲ. ನನ್ನ ತಂದೆ ಖರೀದಿ ಮಾಡುವಾಗ ಸದ್ರಿ ಆಸ್ತಿ ಸರ್ವೆ ನಂ. 401/2 ಆಗಿತ್ತು. ದಾಖಲೆಗಳಲ್ಲೂ ಕೂಡಾ ಸರ್ವೆ ನಂ. 401/2 ಅಂತಲೇ ನಮೂದಾಗಿದೆ. ಆ ಸಮಯದಲ್ಲಿ ನನ್ನ ತಂದೆ ಹಳೆಯ ದಾಖಲಾತಿಗಳನ್ನು ಪಡೆದಿದ್ದರು. ನನ್ನ ತಂದೆ 2 ಎಕರೆ 10 ಗುಂಟೆ 4 ಆಣೆಯನ್ನು ಖರೀದಿಮಾಡಿರುತ್ತಾರೆ. ಪೂರ್ವಕ್ಕೆ ನದಿ ಇದೆ, ಪಶ್ಚಿಮಕ್ಕೆ ರಸ್ತೆ ಮತ್ತು ಪಾಗಾರ, ದಕ್ಷಿಣಕ್ಕೆ ಪಾಗಾರದ ಆಚೆಗೆ ಅಬುಬಕರ ಅವರ ಜಾಗ, ಉತ್ತರಕ್ಕೆ ಮನೆ ಇದೆ. ಅದು ಯಾವ ಮನೆ ಎಂದು ನನಗೆ ಗೊತ್ತಿಲ್ಲ. ಇದೇ ಚೆಕ್ ಬಂದಿಯಲ್ಲಿರುವ ಜಾಗವನ್ನು ನನ್ನ ತಂದೆ ಖರೀದಿ ಮಾಡಿದ್ದರು ಎಂದು ಕ್ರಯದಸ್ತಾವೇಜಿನಲ್ಲಿ ಬರೆಯಲಾಗಿದೆ. ಖರೀದಿ ಸಮಯದಲ್ಲಿ ಗೇರುಬೀಜದ ತೋಟ ಇತ್ತು.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.